

## ಅಮೃತ ಶಿಶುನಿವಾಸದ ಇತರ ಯೋಜನೆಗಳು:

- ಬೆಂಗಳೂರಿನ ಮಾವಳ್ಳಿಯಲ್ಲಿರುವ ಸರ್ಕಾರಿ ಶಾಲೆಯನ್ನು ದತ್ತು ತೆಗೆದುಕೊಂಡು ಅಲ್ಲಿ ವಾಸಿಸುತ್ತಿರುವ ಗ್ರಾಮೀಣ ಪ್ರದೇಶದ ಹುಡುಗರಿಗೆ ಆಹಾರ, ವಸತಿ ಮತ್ತು ವೈದ್ಯಕೀಯ ಸಹಾಯವನ್ನು ನೀಡಲಾಗುತ್ತಿದೆ.
- ಚಾಮರಾಜನಗರದ ಹನೂರಿನಲ್ಲಿ ಅರಣ್ಯದ ಗಡಿ ಭಾಗದಲ್ಲಿ ಶಾಲೆ ಬಿಟ್ಟ ಹೆಣ್ಣು ಮಕ್ಕಳಿಗೆ ಆಶ್ರಯ ನೀಡಿ ಅವರಿಗೆ ವಿದ್ಯಾಭ್ಯಾಸ ಹಾಗೂ ವಿವಿಧ ಜೀವನ ಕೌಶಲ್ಯಗಳಲ್ಲಿ ತರಬೇತಿ ನೀಡಿ ಮುಖ್ಯವಾಹಿನಿಗೆ ತರಲಾಗುತ್ತಿದೆ.
- ಬೆಂಗಳೂರಿನ ಪೂರ್ಣಪ್ರಜ್ಞ ಬಡಾವಣೆ, ಉತ್ತರಹಳ್ಳಿಯಲ್ಲಿ 70000 ಅಡಿ ಚದರ ವಿಸ್ತೀರ್ಣದಲ್ಲಿ 120 ಹಾಸಿಗೆಗಳ ಸೂಪರ್ ಸ್ಪೇಷಾಲಿಟಿ ಆಸ್ಪತ್ರೆಯನ್ನು ನಿರ್ಮಿಸುವ ಯೋಜನೆಯನ್ನು ಹಮ್ಮಿಕೊಂಡಿದೆ. ಈ ಆಸ್ಪತ್ರೆಯೂ ಬಡ ಮತ್ತು ನಿರಾಶ್ರಿತ ತಾಯಿ ಮಕ್ಕಳಿಗೋಸ್ಕರವೇ ಹಾಗಿರುತ್ತದೆ.



ತಾವು ನೀಡುವ ದೇಣಿಗೆಗೆ 80ಜಿ ಕಲಮಿನನ್ವಯ ಆದಾಯಕರ ತೆರಿಗೆ ವಿನಾಯಿತಿ ಸೌಲಭ್ಯವಿದೆ.

ಸಿಎಸ್‌ಆರ್ ನಿಧಿಗಳಿಗಾಗಿ ಭಾರತ ಸರ್ಕಾರದ ದರ್ಪಣ್. ನೀತಿ ಆಯೋಗ, ವಾಣಿಜ್ಯ ಮತ್ತು ಕೈಗಾರಿಕೆಗಳ ಸಚಿವಾಲಯದ ಅಡಿಯಲ್ಲಿ ನೋಂದಾಯಿಸಲಾಗಿದೆ.

ವಿದೇಶಿ ನೆರವನ್ನು ಪಡೆಯಲು ಎಫ್.ಸಿ.ಆರ್.ಎ. ಕಲಮಿನನ್ವಯ ನೋಂದಣಿಯಾಗಿದೆ.

## ಖಾತೆಯ ವಿವರಗಳು:

**For INR**

- **State Bank of India**
  Branch: Shankarapuram,
  Bengaluru 560 004
  Account No. 54003825553
  IFSC No. SBIN0040195
  **Account Holder: Amrutha Shishu Nivasa**

**For Foreign Remittance**

- **FCRA Savings Account**
  Account No. 40674898429
  Branch Code 00691,
  IFSC: SBIN0000691,
  SWIFT: SBININBB104


**ಅಮೃತ ಶಿಶು ನಿವಾಸ**
ನಂ. 1/ಎ, 5ನೇ ಮುಖ್ಯ ರಸ್ತೆ, ದೊಡ್ಡ ಬಸವನಗುಡಿ ರಸ್ತೆ,
ಎನ್ ಆರ್ ಕಾಲೊನಿ, ಬೆಂಗಳೂರು – 560 004.
ಫೋನ್ ನಂ. 26508641, 26675543
ಮೊಬೈಲ್: 8762764643

E-Mail: shishunivasa@gmail.com
Website : shishunivasa.org.in


# ಅಮೃತ ಶಿಶು ನಿವಾಸ

"ನಿರ್ಭಾಗ್ಯ ಹಾಗೂ
ಅನಾಥ ಮಕ್ಕಳ ಬಾಯಿಗೆ
'ತುತ್ತು ಆಹಾರ'
ನೀಡದ ಧರ್ಮ
ಹಾಗೂ ದೇವರನ್ನು
ನಾನು ನಂಬುವುದಿಲ್ಲ
– ಸ್ವಾಮಿ ವಿವೇಕಾನಂದ



ಭಾರತ ಒಂದು ಪ್ರಾಚೀನ ಹಾಗೂ ಅಭಿವೃದ್ಧಿಶೀಲ ರಾಷ್ಟ್ರ. ಇಲ್ಲಿ ಅಭಿವೃದ್ಧಿಯ ಜತೆಯಲ್ಲಿ ಬಡತನ, ನಿರ್ವಸತಿ, ಅಪೋಷಕತೆ, ಅಭದ್ರತೆ, ಅನ್ಯಾಯ, ಅಕ್ರಮ ಇತ್ಯಾದಿ ಹೊಸ ಹೊಸ ಸಮಸ್ಯೆಗಳೂ ಸಹ ವೃದ್ಧಿಸುತ್ತಿವೆ. ಇದರೊಂದಿಗೆ ಆರ್ಥಿಕ ಬಿಕ್ಕಟ್ಟು ಮತ್ತು ಇನ್ನಿತರ ಸಾಮಾಜಿಕ ಸಮಸ್ಯೆಗಳಿಂದ ಹಲವಾರು ಜನರು ತಮ್ಮ ಪ್ರಾಣ ಕಳೆದುಕೊಳ್ಳುವ ಹಂತಕ್ಕೆ ತಲುಪುತ್ತಿರುವುದೂ ಶೋಚನೀಯ ಸಂಗತಿ. ಇನ್ನೊಂದು ಕಡೆ ಅನಾಥರೆಂಬ ಹಣೆಪಟ್ಟಿ ಕಟ್ಟಿಕೊಂಡು ಪ್ರೀತಿ, ಸುರಕ್ಷತೆಗಳಿಂದ ವಂಚಿತರಾಗಿ ದುಷ್ಟಗಳಿಗೆ ಬಲಿಯಾಗುವ ಮಕ್ಕಳ ಸಂಖ್ಯೆಯೂ ಹೆಚ್ಚಾಗುತ್ತಿದೆ. ಇನ್ನೂ ಬಾಳಿ ತಮ್ಮ ಬದುಕನ್ನು ರೂಪಿಸಿಕೊಳ್ಳಲು ಅರಳುತ್ತಿರುವ ಇಂತಹ ಮಕ್ಕಳಿಗೆ ಸಂಸ್ಕಾರದೊಂದಿಗೆ ಉತ್ತಮ ವಸತಿ, ಸುರಕ್ಷೆ, ಶಿಕ್ಷಣ, ಆತ್ಮೀಯತೆಗಳನ್ನು ಕಲ್ಪಿಸಿಕೊಡುವ ಕಾಯಕವನ್ನು ಕಳೆದ 78 ವರ್ಷಗಳಿಂದ ಅಮೃತ ಶಿಶು ನಿವಾಸ ಮಾಡಿಕೊಂಡು ಬರುತ್ತಿದೆ.

ಹಸುಗೂಸುಗಳಿಂದ ಹಿಡಿದು 18 ವರ್ಷದವರೆಗಿನ ಅನಾಥ ಮಕ್ಕಳನ್ನು ಬೆಳೆಸುವ ಸಂಕಲ್ಪವನ್ನು ನಮ್ಮ ಸಂಸ್ಥೆ ಹೊಂದಿದ್ದು ಅದಕ್ಕೆ ಅನುರೂಪವಾದ ಹಲವು ಯೋಜನೆಗಳು ನಮ್ಮಲ್ಲಿವೆ.

ಮಕ್ಕಳ ಸಹಾಯವಾಣಿ, ಮಕ್ಕಳ ಕಲ್ಯಾಣ ಸಮಿತಿಯವರ ಸಲಹೆ, ಸಹಕಾರದೊಂದಿಗೆ ಈ ಮಕ್ಕಳ ಭವಿಷ್ಯವನ್ನು ರೂಪಿಸುವ ನಿಟ್ಟಿನಲ್ಲಿ ಅನಾಥ ಶಿಶು ನಿವಾಸವು ತನ್ನನ್ನು ತೊಡಗಿಸಿಕೊಂಡಿದೆ.

ಶಿಶುನಿವಾಸವು ಸುಭದ್ರವಾದ ಕಟ್ಟಡವನ್ನು ಹೊಂದಿದ್ದು ಇದರಲ್ಲಿ ಗಂಡು ಹಾಗೂ ಹೆಣ್ಣು ಮಕ್ಕಳಿಗೆ ಪ್ರತ್ಯೇಕವಾದ ವಸತಿ ವ್ಯವಸ್ಥೆಯನ್ನು ಕಲ್ಪಿಸಿದೆ. ವಿಶಾಲವಾದ ಊಟದ ಕೋಣೆ, ಕಾರ್ಯಕ್ರಮ ಕೊಠಡಿ, ಉದ್ಯಾನವನ, ಆಟಿಕೆಗಳು, ಆಡಲು ಮೈದಾನವನ್ನು ಸಹ ಹೊಂದಿದೆ.

## ವಿದ್ಯಾಭ್ಯಾಸ :

ಇಲ್ಲಿನ ಮಕ್ಕಳಿಗೆ ಪೂರ್ವ ಪ್ರಾಥಮಿಕ ಶಿಕ್ಷಣವನ್ನು ಮಾಂಟೆಸೋರಿ ಪದ್ಧತಿಯಲ್ಲಿ ಪ್ರಾರಂಭಿಸಿ, ಪ್ರಾಥಮಿಕ ಶಿಕ್ಷಣವನ್ನು ಹತ್ತಿರದ ಕಮಲಾ ನೆಹರು ವಿಮೆನ್ಸ್ ಪೀಸ್ ಲೀಗ್ ಹಾಗೂ ಆರ್.ವಿ. ಶಾಲೆಗಳಲ್ಲಿ ನೀಡಲಾಗುತ್ತಿದೆ.



## ಇತರೆ ಚಟುವಟಿಕೆಗಳು :

ಮಕ್ಕಳ ಮನೋವಿಕಾಸಕ್ಕಾಗಿ ಹಾಗೂ ಸಂಸ್ಕಾರ ಶಿಕ್ಷಣಕ್ಕಾಗಿ ಹಲವಾರು ಕಾರ್ಯಕ್ರಮಗಳನ್ನು ರೂಪಿಸಲಾಗಿದೆ. ಅವುಗಳಲ್ಲಿ ಶ್ರೀರಾಮಕೃಷ್ಣ ಆಶ್ರಮ ಭೇಟಿ, ಪ್ರಾರ್ಥನೆ, ಭಜನೆ, ಅರಳು ಮಲ್ಲಿಗೆ ಇತ್ಯಾದಿ ಮೂಲಕ ಮಕ್ಕಳನ್ನು ಸುಂದರ ಪುಷ್ಪಗಳನ್ನಾಗಿ ರೂಪಿಸುವ ಪ್ರಯತ್ನ ಮಾಡಲಾಗುತ್ತಿದೆ.

ವಾರದ ಕೊನೆಯ ದಿನಗಳಲ್ಲಿ ಸ್ವಯಂ ಸೇವಾಕರ್ತರಾಗಿ ಇಲ್ಲಿಗೆ ಬರುವ ಯುವಕ / ಯುವತಿಯರು ಚಿತ್ರಕಲೆ, ಹಾಡು ನೃತ್ಯ, ಆಟಗಳಲ್ಲಿ ಮಕ್ಕಳಿಗೆ ಸಹಕಾರಿಗಳಾಗಿ ಅವರನ್ನು ಬೆಳೆಸುವಲ್ಲಿ ಸಹಾಯ ನೀಡುತ್ತಿದ್ದಾರೆ.

ಇದಲ್ಲದೆ ಮಕ್ಕಳಲ್ಲಿ ಸಾಮಾಜಿಕ, ಭೌಗೋಳಿಕ ಪರಿಸರದ ಜ್ಞಾನಾರ್ಜನೆಗಾಗಿ ವರ್ಷದಲ್ಲಿ ಒಮ್ಮೆ ಶೈಕ್ಷಣಿಕ ಪ್ರವಾಸವನ್ನು ಕೈಗೊಳ್ಳುತ್ತೇವೆ. ಜೊತೆಗೆ ಸ್ಥಳೀಯ ಸಾಂಸ್ಕೃತಿಕ ಸಂಸ್ಥೆಗಳ ಪ್ರೋತ್ಸಾಹದಿಂದ ನಮ್ಮ ಮಕ್ಕಳು ವಿವಿಧ ಚಟುವಟಿಕೆಗಳಲ್ಲಿ ಭಾಗವಹಿಸಿ ತಮ್ಮ ಪ್ರತಿಭೆಯನ್ನು ಪ್ರದರ್ಶಿಸುವ ಅವಕಾಶವನ್ನು ಪಡೆದುಕೊಳ್ಳುತ್ತಿದ್ದಾರೆ.

ಇಲ್ಲಿನ ಪರಿಸರದಲ್ಲಿ ಬೆಳೆದ ಮಕ್ಕಳಿಗೆ ವೃತ್ತಿ ತರಬೇತಿಗಳಲ್ಲಿ ಪರಿಣತಿಯನ್ನು ನೀಡಿ ಅವರನ್ನು ಸ್ವಾವಲಂಬಿಯಾಗಿ ಬೆಳೆಸುವ ನಿಟ್ಟಿನಲ್ಲಿ ಸಹ ಪ್ರಯತ್ನ ನಡೆಯುತ್ತಿದೆ.

**ಶಿಶುನಿವಾಸದಲ್ಲಿ ಪೋಷಿತರಾದ ಮಕ್ಕಳನ್ನು ದತ್ತಕ ನೀಡುವ ಮುಖ್ಯಕರವಾದ ಕೆಲಸ ಸಹ ಇಲ್ಲಿ ನಡೆಯುತ್ತಿದೆ. ಇಲ್ಲಿಂದ ದತ್ತಕ ಹೋದ ಮಕ್ಕಳು ಉತ್ತಮವಾದ ಭವಿಷ್ಯವನ್ನು ರೂಪಿಸಿಕೊಂಡು ಬೆಳೆಯುತ್ತಿರುವುದು ಸಂತೋಷದಾಯಕವಾದ ಸಂಗತಿ. ಇದೊಂದು ಸರ್ಕಾರದಿಂದ ಮಾನ್ಯತೆ ಪಡೆದ ದತ್ತು ನೀಡುವ ಸಂಸ್ಥೆಯಾಗಿದ್ದು ಹಲವಾರು ದಂಪತಿಗಳು ಫಲಾನುಭವಿಗಳಾಗಿದ್ದು, ಸಾರ್ಥಕತೆ ಅನುಭವಿಸಿ ಧನ್ಯರಾಗಿದ್ದಾರೆ.**

ಇದಲ್ಲದೆ ಕಂಪ್ಯೂಟರ್ ತರಬೇತಿ ಕೇಂದ್ರ, ಹೊಲಿಗೆ ತರಬೇತಿ ಕೇಂದ್ರ ಹಾಗೂ ಸಂಜೀವಿನಿ ಉಚಿತ ಆರೋಗ್ಯ ತಪಾಸಣಾ ಕೇಂದ್ರ ಇವು ಶಿಶುನಿವಾಸದ ಜೊತೆ ಹೊರಗಿನ ಜನತೆಯೊಡನೆ ಸಂಬಂಧವನ್ನು ಕಲ್ಪಿಸುವ ನಿಟ್ಟಿನಲ್ಲಿ ಸಕ್ರಿಯವಾಗಿದೆ.

ಸಮಾಜದಲ್ಲಿ ಸರ್ವ ಕಾಲಕ್ಕೂ ಇತರರನ್ನು ಬೆಳೆಸುವ, ಸಮಾಜವನ್ನು ಜಾಗೃತಗೊಳಿಸುವ, ಬೇರೆಯವರ ದುಃಖ, ನೋವಿಗೆ ಮನಮಿಡಿಯುವ ಹಾಗೂ ಸ್ಪಂದಿಸುವ ಕೆಲಸ ಕಾರ್ಯಗಳು ಜರುಗುತ್ತಲೇ ಇವೆ. ಈ ಎಲ್ಲ ಕೆಲಸಗಳಿಗೆ ನಮ್ಮೊಂದಿಗೆ ನಿರಂತರವಾಗಿ ಕೈ ಜೋಡಿಸುತ್ತಿರುವ ದಾನಿಗಳ ಸಹಾಯಕ್ಕೆ ಸಂಸ್ಥೆಯು ಚಿರಋಣಿಯಾಗಿದೆ. ಈ ಮಕ್ಕಳ ಸರ್ವಾಂಗೀಣ ಬೆಳವಣಿಗೆಗೆ ಇನ್ನೂ ಹೆಚ್ಚಿನ ನೆರವು ನೀಡುವ ನಿಟ್ಟಿನಲ್ಲಿ ನಮ್ಮೊಂದಿಗೆ ಸಹಾಯಹಸ್ತ ನೀಡಿ.

**ವಸ್ತುರೂಪದಲ್ಲೂ ವಂತಿಗೆಯನ್ನು ನೀಡಬಹುದು.**
**ನಿರ್ದಿಷ್ಟ ಹಣವನ್ನು ಮೂಲ ನಿಧಿಯ (Corpus– ದತ್ತಿ) ರೂಪದಲ್ಲಿ ಮಕ್ಕಳ ಕಲ್ಯಾಣಕ್ಕೆ ನೀಡಬಹುದು.**

### ನೀವು ನಮ್ಮೊಂದಿಗೆ ಹೀಗೆ ಕೈ ಜೋಡಿಸಬಹುದು (ರೂ.ಗಳಲ್ಲಿ)

| | |
|---|---|
| ಒಂದು ದಿನದ ಆಹಾರ | ರೂ. 6000.00 |
| ಒಂದು ಹೊತ್ತಿನ ಊಟ | ರೂ. 2,000.00 |
| ಬೆಳಗಿನ ಉಪಹಾರ – ಹಾಲು ಅಥವಾ ಸಂಜೆ ಸ್ನ್ಯಾಕ್ಸ್ – ಹಾಲು | ರೂ. 1000.00 |

